ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (393)202
ಸದಸ್ಯರ ಹೆಸರು : ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ
ಉತ್ತರಿಸುವವರು : (ಶ್ರೀ ಬಿ.ಎಸ್.ಯಡಿಯೂರಪ್ಪ)
ಮಾನ್ಯ ಮುಖ್ಯಮಂತ್ರಿಗಳು.

ಅ) ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಹಟ್ಟಿ ಚಿನ್ನದ ಗಣಿಯಲ್ಲಿ ಕಾರ್ಯನಿರ್ವ ಹಿಸುತ್ತಿರುವ ದಿನಗೂಲಿ ನೌಕರರ ಸಂಖ್ಯೆ ಎಷ್ಟು;

ಪ್ರಸ್ತುತ ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲ್ಲೂಕಿನ ಹಟ್ಟಿ ಚಿನ್ನದ ಗಣಿಯಲ್ಲಿ 415 ಜನರು ಏಜೆನ್ಸಿ ಮೂಲಕ ಹಂಗಾಮಿ ನೌಕರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಆ) ಕಂಪನಿಯ ದಿನಗೂಲಿ ನೌಕರರನ್ನು ಖಾಯಂಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಹಾಲಿ ದಿನಗೂಲಿ ನೌಕರರನ್ನು ಹಂತ ಹಂತವಾಗಿ ಖಾಯಂಗೊಳಿಸಲು ದಿನಾಂಕ: 06.03.2008ರಂದು ಜರುಗಿದ ಕಂಪನಿಯ ಆಡಳಿತ ಮಂಡಳಿಯ ಸಭೆಯಲ್ಲಿ ನಿರ್ಣಯವನ್ನು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಇ) ಅವರನ್ನು ಎಂದಿನಿಂದ ಸೇವೆಯಲ್ಲಿ ಖಾಯಂಗೊಳಿಸಲಾಗುವುದು?

'ಆ' ಪ್ರಶ್ನೆಗೆ ನೀಡಿದ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (412)203
ಸದಸ್ಯರ ಹೆಸರು : ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ
ಉತ್ತರಿಸುವ ಸಚಿವರು : (ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು)
ಮಾನ್ಯ ವಾರ್ತಾ ಸಚಿವರು

01. ನೂತನ ಸರ್ಕಾರ ಪತ್ರಿಕಾ ಮಾಧ್ಯಮದಲ್ಲಿ ಜಾಹೀರಾತಿಗಾಗಿ ಸರ್ಕಾರದ ವಿವಿಧ ಇಲಾಖೆಗಳಿಗೆ ಒದಗಿಸಲಾದ ಅನುದಾನವೆಷ್ಟು;

ಕಚೇರಿ ವೆಚ್ಚಗಳು,ಗ್ರಂಥಾಲಯಗಳು ಮತ್ತು ನಿಯತಕಾಲಿಕೆಗಳು, ಮುದ್ರಣ, ಪ್ರಕಟಣೆ ಮತ್ತು ಜಾಹೀರಾತು, ಆತಿಥ್ಯ ವೆಚ್ಚಗಳು, ಮನರಂಜನೆ ವೆಚ್ಚಗಳು ಮತ್ತು ಗಣಕಯಂತ್ರ ಸೌಲಭ್ಯಗಳಿಗೆ ಸಂಬಂಧಿತ ವೆಚ್ಚಗಳನ್ನು "051 ಸಾಮಾನ್ಯ ವೆಚ್ಚಗಳು" ಎಂಬ ಸವಿವರ ಲೆಕ್ಕಶೀರ್ಷಿಕೆಯಡಿ ವಿಲೀನಗೊಳಿಸಲಾಗಿದೆ. ಆದ್ದರಿಂದ ಅಖಂಡವಾಗಿ ಪತ್ರಿಕಾ ಮಾಧ್ಯಮದಲ್ಲಿ ಜಾಹೀರಾತಿಗಾಗಿ ನಿಗದಿಪಡಿಸಲಾಗಿರುವ ಅನುದಾನವನ್ನು ಮಾತ್ರ ಬೇರ್ಪಡಿಸಲು ಸಾಧ್ಯವಿರುವುದಿಲ್ಲ.

02. ನೂತನ ಸರ್ಕಾರ ಅಸ್ತಿತ್ವಕ್ಕೆ ಬಂದಾಗಿನಿಂದ ವಿವಿಧ ಮಾಧ್ಯಮಗಳಿಗೆ ಪ್ರಚಾರಕ್ಕಾಗಿ ಈವರೆವಿಗೂ ಎಷ್ಟು ಹಣವನ್ನು ವ್ಯಯಿಸಲಾಗಿದೆ?

ನೂತನ ಸರ್ಕಾರವು ಅಸ್ತಿತ್ವಕ್ಕೆ ಬಂದ ನಂತರ ವಿವಿಧ ಮಾಧ್ಯಮಗಳಲ್ಲಿ ಪ್ರಚಾರಕ್ಕಾಗಿ ಈವರೆವಿಗೂ 2.54 ಕೋಟಿ ರೂಪಾಯಿಗಳನ್ನು ವ್ಯಯ ಮಾಡಲಾಗಿರುತ್ತದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (400)204
ಮಾನ್ಯ ಸದಸ್ಯರ ಹೆಸರು : ಶ್ರೀ ಅಪ್ಪಸಾಹೇಬ(ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ
ಉತ್ತರಿಸುವ ಸಚಿವರು : (ಶ್ರೀ ಜಿ.ಜನಾರ್ಧನ ರೆಡ್ಡಿ) ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು

ಅ) ಬಿಜಾಪುರದ ನಗರದಲ್ಲಿರುವ ಪ್ರಸಿದ್ಧಿ ಪಡೆದಿರುವ ಐತಿಹಾಸಿಕ ಪ್ರವಾಸೋದ್ಯಮ ಸ್ಥಳಗಳು ಯಾವುವು;

ಗೋಲ್ ಗುಂಬಜ್, ಇಬ್ರಾಹಿಮ್ ರೋಜಾ ಜಾಮಿಯಾ ಮಸೀದಿ, ಮಹತ್ತರ್ ಮಹಲ್, ಬಾರಾ ಕಮಾನ್, ತಾಜ್ ಬಾವಡಿ, ಸಹಸ್ರ ಫಣಿ ಪಾರ್ಶ್ವನಾಥ ಜೈನ ಬಸ್ತಿ ಗಗನ್ ಮಹಲ್ ಮಾಲಿಕ್–ಎ–ಮೈದಾನ್ ಇತ್ಯಾದಿಗಳು ಬಿಜಾಪುರ ನಗರದಲ್ಲಿ ಪ್ರಸಿದ್ಧಿ ಪಡೆದಿರುವ ಐತಿಹಾಸಿಕ ಸ್ಥಳಗಳಾಗಿವೆ.

ಆ) ಐತಿಹಾಸಿಕ ಪ್ರವಾಸಿ ಸ್ಥಳಗಳನ್ನು ವೀಕ್ಷಿಸಲು ಪ್ರತಿದಿನ ಆಗಮಿಸುತ್ತಿರುವ ದೇಶೀಯ ಹಾಗೂ ವಿದೇಶಿ ಪ್ರವಾಸಿಗರ ಸಂಖ್ಯೆ ಎಷ್ಟು;

ಈ ಸ್ಥಳಗಳನ್ನು ವೀಕ್ಷಿಸಲು ಪ್ರತಿ ದಿನ ಸುಮಾರು 2000–3000 ದೇಶೀಯ ಪ್ರವಾಸಿಗರು ಹಾಗೂ 50–60 ಮಂದಿ ವಿದೇಶೀಯ ಪ್ರವಾಸಿಗರು ಭೇಟಿ ನೀಡುತ್ತಿದ್ದಾರೆ.

ಇ) ಪ್ರವಾಸಿಗರ ಆಗಮನದಿಂದ ಸರ್ಕಾರಕ್ಕೆ ಬರುತ್ತಿರುವ ಆದಾಯ ಎಷ್ಟು;

ಈ ಪ್ರವಾಸಿಗರಿಂದ ಸರ್ಕಾರಕ್ಕೆ ನೇರವಾಗಿ ಬರುತ್ತಿರುವ ಆದಾಯವನ್ನು ನಿಖರವಾಗಿ ಹೇಳಲಾಗುವುದಿಲ್ಲ ಆದರೆ ಪ್ರವಾಸಿಗರ ಆಗಮನದಿಂದ ಸರ್ಕಾರಕ್ಕೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಆದಾಯವಿರುತ್ತದೆ.

ಈ) ದೇಶೀಯ ಹಾಗೂ ವಿದೇಶಿ ಪ್ರವಾಸಿಗರ ಅನುಕೂಲಕ್ಕಾಗಿ ಯಾವ ಯಾವ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ;

1. ಗೋಲ್ಗುಂಬಜ್ ಕಟ್ಟಡಕ್ಕೆ ಹೊನಲು ಬೆಳಕಿನ ವ್ಯವಸ್ಥೆ ಕಲ್ಪಿಸಲಾಗಿದೆ.
2. ಗೋಲ್ ಗುಮ್ಮಟ, ಬಾರಾ ಕಮಾನ್, ಇಬ್ರಾಹಿಂ ರೋಜಾ, ಜೈನ್ ಮಂದಿರ ಜಲಮಂದಿರ, ಶಿವಗಿರಿಗಳ ಬಳಿ ಹೈಟೆಕ್ ಶೌಚಾಲಯ ಹಾಗೂ ಕುಡಿಯಲು ನೀರಿನ ಸೌಲಭ್ಯಗಳನ್ನು ನಿರ್ಮಿಸಲಾಗಿದೆ.
3. ಹೋಟೆಲ್ ಮಯೂರ ಆದಿಲ್ ಶಾಹಿಯನ್ನು ನಡೆಸಲಾಗುತ್ತಿದೆ.